Downloaded From : http://cbseportal.com/

SET-4

Series JMS

Code No. 13

Roll No. | | | | | | | |

Candidates must write the Code on the title page of the answer-book.

- ಈ ಪ್ರಶ್ನೆ ಪತ್ರಿಕೆಯಲ್ಲಿ **11** ಮುದ್ರಿತ ಪುಟಗಳಿವೆಯೆಂಬುದನ್ನು ಪರಿಶೀಲಿಸಿ.
- ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿ ಕೊಟ್ಟಿರುವ ಕೋಡ್ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಮುಖ ಪುಟದಲ್ಲಿ ಅಭ್ಯರ್ಥಿಯು ಬರೆಯಬೇಕು.
- ಈ ಪ್ರಶ್ನೆ ಪತ್ರಿಕೆಯಲ್ಲಿ **IX** ಪ್ರಶ್ನೆಗಳಿವೆ ಎಂಬುದನ್ನು ಗಮನಿಸಿ.
- **ಉತ್ತರಿಸುವುದಕ್ಕೆ ಮೊದಲು ಪ್ರಶ್ನೆಯ ಕ್ರಮ ಸಂಖ್ಯೆಯನ್ನು ಬರೆಯಿರಿ.**
- ಈ ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆ ಪತ್ರಿಕೆಯನ್ನು 10.15 a.m. ಗೆ ವಿತರಿಸಲಾಗುವುದು. 10.15 a.m. ನಿಂದ 10.30 a.m. ರ ತನಕ ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಬೇಕು ಮತ್ತು ಈ ಅವಧಿಯಲ್ಲಿ ಯಾವುದೇ ಉತ್ತರವನ್ನು ಉತ್ತರ ಪತ್ರಿಕೆಯಲ್ಲಿ ಬರೆಯ ಬಾರದು.

- Please check that this question paper contains **11** printed pages.
- Code number given on the right hand side of the question paper should be written on the title page of the answer-book by the candidate.
- Please check that this question paper contains **IX** questions.
- **Please write down the Serial Number of the question before attempting it.**
- 15 minute time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the students will read the question paper only and will not write any answer on the answer-book during this period.

# ಕನ್ನಡ

# KANNADA

*ಅನುಮತಿಸಲಾದ ಸಮಯ : 3 ಗಂಟೆ* | *ಗರಿಷ್ಠ ಅಂಕಗಳು : 80*

*Time allowed : 3 hours* | *Maximum Marks : 80*



Downloaded From : http://cbseportal.com/ Courtesy : CBSE

Downloaded From : http://cbseportal.com/

**ಸೂಚನೆಗಳು :** ಈ ಪ್ರಶ್ನೆ ಪತ್ರಿಕೆಯು *A, B, C* ಮತ್ತು *D* ಎಂಬ ನಾಲ್ಕು ವಿಭಾಗಗಳನ್ನೊಳಗೊಂಡಿದೆ.

| | | |
|---|---|---|
| **ವಿಭಾಗ – A** (ವಾಚನ ಮತ್ತು ಗ್ರಹಿಕಾ ಕೌಶಲ) | : | 12 ಅಂಕಗಳು |
| **ವಿಭಾಗ – B** (ಬರವಣಿಗೆ ಕೌಶಲ) | : | 15 ಅಂಕಗಳು |
| **ವಿಭಾಗ – C** (ಅನ್ವಯಿಕ ವ್ಯಾಕರಣ) | : | 18 ಅಂಕಗಳು |
| **ವಿಭಾಗ – D** (ಪಠ್ಯಗಳ ಅಧ್ಯಯನ) | : | 35 ಅಂಕಗಳು |

## ವಿಭಾಗ – A

## (ವಾಚನ ಮತ್ತು ಗ್ರಹಿಕಾ ಕೌಶಲ) : 12 ಅಂಕಗಳು

**I.** 1. ಈ ಗದ್ಯ ಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ :

ಅಮೇರಿಕಾದ ಟೆಕ್ಸಾಸ್ ಯೂನಿವರ್ಸಿಟಿಯ ಮನೋವಿಜ್ಞಾನ ವಿಭಾಗದ ಪ್ರೊ. ಜೇಮ್ಸ್ ಪೆನ್ನೆಬೇಕರ್ ಅವರ ಸಂಶೋಧನೆಯ ಪ್ರಕಾರ ಪ್ರತಿನಿತ್ಯ ಡೈರಿ ಬರೆಯುವುದರಿಂದ ಮಾನಸಿಕ ಮತ್ತು ದೈಹಿಕ ಆರೋಗ್ಯ ವೃದ್ಧಿಯಾಗುತ್ತದೆ ಎಂಬುದು ಸಾಬೀತಾಗಿದೆ.

ಯಾವುದೇ ವ್ಯಕ್ತಿಯು ದಿನಚರಿ ಬರೆಯುವುದರಿಂದ ಆ ವ್ಯಕ್ತಿಗೆ ತನ್ನ ಬಯಕೆ ಅಥವಾ ಗುರಿ ನಿಚ್ಚಳವಾಗುತ್ತದೆ. ಅಲ್ಲದೆ ಅದು ಮನಸ್ಸಿನಲ್ಲಿ ಅದುಮಿಟ್ಟ ಭಾವನೆಗಳ ಅಭಿವ್ಯಕ್ತಿಗೆ ಮಾಧ್ಯಮವಾಗುವುದರಿಂದ ಆತನಿಗೆ ತನ್ನ ವರ್ತನೆ ಮತ್ತು ತನ್ನಲ್ಲಿರಬಹುದಾದ ದೌರ್ಬಲ್ಯ ಅಥವಾ ತಪ್ಪುಗಳ ಅರಿವಾಗುತ್ತದೆ ಆಗ ಅವುಗಳಿಂದ ಪಾರಾಗುವುದರ ಬಗ್ಗೆ ಆತ ಚಿಂತನೆ ಮಾಡುತ್ತಾನೆ.

ಡೈರಿಯು ತಮ್ಮ ಬದುಕಿನ ಆಗುಹೋಗುಗಳ ಒಂದು ದಾಖಲೆಯಾಗುವುದರಿಂದ ಅಲ್ಲಿ ನಮಗೆ ಸಂಬಂಧಿಸಿದ ಮಾಹಿತಿಗಳು ಸಿಗುತ್ತವೆ. ವಿದ್ಯಾಭ್ಯಾಸದಲ್ಲಿ ಸಾಧನೆ, ಉದ್ಯೋಗ, ಮದುವೆ, ಮಕ್ಕಳು, ಅನುಭವಿಸಿದ ಸಂತೋಷ, ನಿರಾಶೆ – ಹೀಗೆ ಪಟ್ಟಿಗೆ ಕೊನೆ ಎಂಬುದೇ ಇಲ್ಲ.

ಇನ್ನೊಂದು ಬಹಳ ಮುಖ್ಯವಾದ ಪ್ರಯೋಜನವೆಂದರೆ ವಿದ್ಯಾರ್ಥಿಗಳು ದಿನಚರಿ ಬರೆಯುವುದರಿಂದ ಅವರಿಗೆ ತಮ್ಮ ವಿಚಾರಗಳನ್ನು ಕ್ರಮಬದ್ಧವಾಗಿ ಮಂಡಿಸುವ ನೈಪುಣ್ಯತೆ ರೂಢಿಯಾಗುವುದಲ್ಲದೆ ಭಾಷಾ ಜ್ಞಾನ ವೃದ್ಧಿಸುತ್ತದೆ. ಹಲವು ವಿಚಾರಗಳನ್ನು ಸಂಕ್ಷಿಪ್ತವಾಗಿ ಹೇಳುವ ಕಲೆ ಸಿದ್ಧಿಸುತ್ತದೆ. ಜೊತೆಗೆ ನೆನಪಿನ ಶಕ್ತಿ ಚುರುಕಾಗುತ್ತದೆ. ಅಲ್ಲದೆ ಶಿಸ್ತು ಮತ್ತು ಸೃಜನಶೀಲ ಪ್ರವೃತ್ತಿ ಹೆಚ್ಚಾಗುತ್ತದೆ.


Downloaded From : http://cbseportal.com/ Courtesy : CBSE

Downloaded From : http://cbseportal.com/

ಪ್ರಶ್ನೆಗಳು :

(ಅ) ಪ್ರೊ. ಜೇಮ್ಸ್ ಪೆನ್ನೆಬೇಕರ್ ಪ್ರಕಾರ ಡೈರಿ ಬರೆಯುವುದರಿಂದ ಆಗುವ ಪ್ರಯೋಜನವೇನು ? *1*

(ಆ) ಡೈರಿಯು ವ್ಯಕ್ತಿಗೆ ತನ್ನ ದೌರ್ಬಲ್ಯಗಳನ್ನು ತಿಳಿಯಲು ಹೇಗೆ ಸಹಕಾರಿಯಾಗುತ್ತದೆ ? *1*

(ಇ) ವಿದ್ಯಾರ್ಥಿಗಳಿಗೆ ಭಾಷಾಕೌಶಲ ಸಿದ್ಧಿಯಲ್ಲಿ ಡೈರಿ ಹೇಗೆ ಪ್ರಮುಖ ಪಾತ್ರ ವಹಿಸುತ್ತದೆ ? *2*

(ಈ) "ಡೈರಿ ನಮ್ಮ ಬದುಕಿನ ಒಂದು ಪ್ರಮುಖ ದಾಖಲೆ" – ವಿವರಿಸಿ. *2*

2. ಈ ಪದ್ಯ ಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ :

ನನ್ನೂರ ಅರಳೀಮರದ ರೆಂಬೆ ಕೊಂಬೆಗಳಲ್ಲಿ
ಗೂಡು ಕಟ್ಟುತ್ತಿದ್ದವು ಹಕ್ಕಿಗಳು
ತಲೆಕೆಳಗಾಗಿ ನೇತಾಡುತ್ತಿದ್ದವು ಬಾವಲಿಗಳು
ಕೇಳಿಸುತ್ತಿತ್ತು ಹತ್ತಾರು ಧ್ವನಿ, ಗಿಣಿ ಗೊರವಂಕ
ಗುಬ್ಬಚ್ಚಿಗಳ ಚಿಲಿಪಿಲಿ.

ಮರದ ಪೊಟರೆಯೊಳಗೆ ಜೇಗುಡುತ್ತಿದ್ದವು ಜೇನ್ನೊಣ
ದೊರಕುತ್ತಿತ್ತು ತುಪ್ಪದ ಜೊತೆಗೊಂದಿಷ್ಟು ಅಂಟಿನ ಮೇಣ
ಬರಿದ ಕಲ್ಲು ಬಿಲಗಳೆಡೆಯಲ್ಲಿ ಹರಿದಾಡುತ್ತಿದ್ದವು
ಕೇರೆ ಓತಿಕ್ಯಾತ ಹಾವುರಾಣಿ.

ಮಕ್ಕಳಾಗದ ಮುತ್ತೈದೆಯರು ಕಟ್ಟುತ್ತಿದ್ದರು
ಕೊಂಬೆಗೆ ಅರಿಶಿನ ದಾರ
ಬಲವಂದು ಸುತ್ತುತ್ತಿದ್ದರು ಅರಳಿಕಟ್ಟೆಯ ಹಜಾರ
ನ್ಯಾಯ ತೀರ್ಮಾನಕ್ಕೂ ಅಲ್ಲೇ ಕೂರುತ್ತಿತ್ತು
ನಿರ್ಣಾಯಕ ಮಂದಿ, ಸಾಕ್ಷಿ, ಸಭಾಸದರು


Downloaded From : http://cbseportal.com/ Courtesy : CBSE

Downloaded From : http://cbseportal.com/

ಇಂದು ಅಲ್ಲಿ ಅರಳೀ ಮರವಿಲ್ಲ ಕಟ್ಟೆಯೂ ಇಲ್ಲ
ಯಾಕೆಂದರೆ ಊರ ನೂರು ಕೊಡಲಿ ಹೊಡೆತಕ್ಕೆ
ಜೀವತೆತ್ತ ಮರ ಒಲೆಯೊಳಗೆ ಉರಿದು ಬೂದಿ
ಆದರೆ ನನ್ನ ಪಾಲಿಗೆ ಸತ್ತಿಲ್ಲ ಮರ, ಕಾರಣವೆಂದರೆ
ನನ್ನದೆ ವೃಕ್ಷದಲಿ ಗೂಡುಕಟ್ಟಿವೆ ನೆನಪುಗಳು
ಅಚ್ಚೊತ್ತಿವೆ ಬಾಲ್ಯದಾಕ್ಷಣಗಳು !

**ಪ್ರಶ್ನೆಗಳು :**

(ಅ) ಬಾವಲಿಗಳು ಹೇಗೆ ನೇತಾಡುತ್ತಿದ್ದವು ? *1*

(ಆ) ಮುತ್ತೈದೆಯರು ಅರಳೀಕಟ್ಟೆಗೆ ಏನು ಮಾಡುತ್ತಿದ್ದರು ? *1*

(ಇ) ಇಂದು ಅರಳೀ ಮರಕ್ಕೆ ಯಾವ ಸ್ಥಿತಿ ಒದಗಿದೆ ? *2*

(ಈ) ಮರ ಸತ್ತಿಲ್ಲವೆಂದು ಕವಿ ಏಕೆ ಹೇಳುತ್ತಾರೆ ? *2*

## ವಿಭಾಗ – B

## (ಬರವಣಿಗೆ ಕೌಶಲ) : 15 ಅಂಕಗಳು

**II.** ಕೆಳಗಿನ ಯಾವುದಾದರೂ **ಒಂದು** ವಿಷಯವನ್ನು ಕುರಿತು 150 ಪದಗಳಿಗೆ ಮೀರದಂತೆ ನಿಬಂಧವನ್ನು ಬರೆಯಿರಿ : *6*

(ಅ) ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವುದು ಅತ್ಯವಶ್ಯಕ

(ಆ) “ನಿಮ್ಮ ವ್ಯಕ್ತಿತ್ವ ರೂಪಿಸುವಲ್ಲಿ ಹೆಚ್ಚು ಪ್ರಭಾವ ಬೀರಿದ ವ್ಯಕ್ತಿ”

(ಇ) ಚುನಾವಣೆ ಪ್ರಕ್ರಿಯೆಯ ಮಹತ್ವ


Downloaded From : http://cbseportal.com/ Courtesy : CBSE

Downloaded From :http://cbseportal.com/

**III.** ಶಾಲಾ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಬಸ್ ವ್ಯವಸ್ಥೆ ಕಲ್ಪಿಸುವಂತೆ ಕೋರಿ ನಿಮ್ಮ ಜಿಲ್ಲೆಯ ಸಂಚಾರ ಮತ್ತು ಸಾರಿಗೆ ನಿಗಮದ ಅಧ್ಯಕ್ಷರಿಗೆ ಪತ್ರ ಬರೆಯಿರಿ. *5*

**ಅಥವಾ**

ದಿನಾಂಕ 20.02.2018 ರ ಪ್ರಜಾವಾಣಿ ದಿನಪತ್ರಿಕೆಯ ಜಾಹೀರಾತಿನ ಮೇರೆಗೆ 'ನಿರ್ದೇಶಕರು, ಗ್ರಂಥಾಲಯ ವಿಭಾಗ, ಮೈಸೂರು ವಿಶ್ವವಿದ್ಯಾಲಯ' – ಇಲ್ಲಿಗೆ ಗ್ರಂಥಾಲಯ ಪಾಲಕರ ಹುದ್ದೆಗೆ ಅರ್ಜಿಯನ್ನು ಬರೆಯಿರಿ.

**IV.** ಕಲಾವಿದ ವೆಂಕಟಪ್ಪನವರ ಜನ್ಮದಿನದ ಆಚರಣೆಯ ಅಂಗವಾಗಿ ಚಿತ್ರಕಲಾ ಪರಿಷತ್ತಿನಲ್ಲಿ ಆಯೋಜಿಸಿದ್ದ "ಚಿತ್ರಕಲಾ ಪ್ರದರ್ಶನ ಉದ್ಘಾಟನೆ' ಯ ಸಮಾರಂಭದ ವರದಿಯನ್ನು ಬರೆಯಿರಿ. *4*

## ವಿಭಾಗ – C

## (ಅನ್ವಯಿಕ ವ್ಯಾಕರಣ) : 18 ಅಂಕಗಳು

**V.** ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರವನ್ನು ಬರೆಯಿರಿ :

1. ಕೆಳಗಿನ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ : *2*

   (i) ಸಕಳಾಚಾರ್ಯ

   (ii) ಜಾತ್ಯಾತೀತ

2. ಕೆಳಗಿನ ಪದಗಳನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿ : *2*

   (i) ಪೆರ್ಬಂಡೆ

   (ii) ಈ ಹುಡುಗ

3. ಕೆಳಗಿನ ಪದ/ನುಡಿಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಉಪಯೋಗಿಸಿ : *2*

   (i) ಒರೆಹಚ್ಚು

   (ii) ಘಾಸಿಗೊಳಿಸು


Downloaded From :http://cbseportal.com/ Courtesy : CBSE

Downloaded From : http://cbseportal.com/

4. ಕೆಳಗಿನ ಪದಗಳಿಗೆ ತತ್ಸಮ / ತದ್ಭವ ರೂಪವನ್ನು ಬರೆಯಿರಿ : *1*

(i) ಕಾರ್ಯ

(ii) ಬೊಮ್ಮ

5. ಈ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ : *1*

(i) ಮೇಘ

(ii) ಮರ್ಕಟ

6. ಈ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ : *1*

(i) ದೋಷಿ

(ii) ಅಂತರಂಗ

7. ಈ ಪದಗಳಲ್ಲಿ ದ್ವಿರುಕ್ತಿ, ಜೋಡುನುಡಿಗಳನ್ನು ಗುರುತಿಸಿ ಬರೆಯಿರಿ : *1*

(i) ಬಟ್ಟೆಬರೆ

(ii) ತುತ್ತತುದಿ

8. ಈ ಪದಗಳ ವಿಭಕ್ತಿಯನ್ನು ಹೆಸರಿಸಿ : *1*

(i) ಪನ್ನಗಂ

(ii) ದೂರದೊಳ್

9. ಈ ಪದಕ್ಕೆ ನಾನಾರ್ಥವನ್ನು ಬರೆಯಿರಿ : *1*

ಕಾಡು

10. ಮೊದಲೆರಡು ಪದಗಳಿಗಿರುವ ಸಂಬಂಧವನ್ನು ಗಮನಿಸಿ, ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ : *1*

(i) ಜನಕ : ಜನರಿಗೆ : : ಜತೆಯಾಗ : __________

(ii) ತಿನ್ನು : ಧಾತು : : ಅವನು : __________

11. "ದೇಶದೆಲ್ಲೆಡೆಯಿಂದ ಭಕ್ತಾದಿಗಳು ಕುಂಭಮೇಳಕ್ಕೆ ಬರುವರು." – ಈ ವಾಕ್ಯವನ್ನು ವರ್ತಮಾನ ಕಾಲಕ್ಕೆ ಬದಲಾಯಿಸಿ. *1*


Downloaded From : http://cbseportal.com/ Courtesy : CBSE

Downloaded From : http://cbseportal.com/

12. "ಗೌರಿಯು ಮಲ್ಲಿಗೆ ಹೂವಿನ ದಂಡೆಯನ್ನು ಕಟ್ಟಿದಳು." – ಈ ವಾಕ್ಯವನ್ನು ಕರ್ಮಣಿ ವಾಕ್ಯವನ್ನಾಗಿ ಪರಿವರ್ತಿಸಿ. *1*

13. "ದೇವಸ್ಥಾನದ ಕಟ್ಟಡ ಕೆಲಸವು ಒಂದು ವರ್ಷದೊಳಗೆ ಮುಗಿಯುತ್ತದೆ." – ಈ ವಾಕ್ಯವನ್ನು ಸಂಭವನಾರ್ಥಕ ರೂಪಕ್ಕೆ ಬದಲಾಯಿಸಿ. *1*

14. ಈ ಗಾದೆ ಮಾತುಗಳಲ್ಲಿ ಒಂದನ್ನು ವಿವರಿಸಿ : *2*
    (i) "ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು"
    (ii) "ಕಾಸಿದ್ದರೆ ಕೈಲಾಸ"

## ವಿಭಾಗ – D

## (ಪದ್ಯಗಳ ಅಧ್ಯಯನ) : 35 ಅಂಕಗಳು

**VI.** ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ : *1×10=10*

1. ಅಮೆರಿಕದಲ್ಲಿ ಗೊರೂರರು ಮೂರ್‍ನಾಲ್ಕು ದಿನ ಮಗಳ ಮನೆಗೆ ಹತ್ತಿರದಲ್ಲಿದ್ದ ಶಾಲೆಗೆ ಭೇಟಿ ನೀಡಿದ್ದು ಈ ಕಾರಣದಿಂದ :
    (i) ಖಾದಿ ಬಟ್ಟೆಯ ಮಹತ್ವ ತಿಳಿಸಲು
    (ii) ವಿದ್ಯುತ್ ಒಲೆ ನಂದಿಸಲು ಸಹಾಯ ಕೇಳಲು
    (iii) ಅಮೇರಿಕನ್ನರ ಜೀವನ ಕ್ರಮ ತಿಳಿಯಲು
    (iv) ವಿದ್ಯಾರ್ಥಿಗಳಿಗೆ ಪಾಠ ಮಾಡಲು

2. 'ಧರ್ಮ ಸಮದೃಷ್ಟಿ' ಶಾಸನ ವಿಜಯ ನಗರದ ಈ ಅರಸರಿಗೆ ಸಂಬಂಧಿಸಿದ್ದಾಗಿದೆ :
    (i) ವೀರ ಬುಕ್ಕರಾಯನಿಗೆ
    (ii) ಕೃಷ್ಣದೇವ ರಾಯನಿಗೆ
    (iii) ಹಕ್ಕಬುಕ್ಕರಿಗೆ
    (iv) ವಿದ್ಯಾರಣ್ಯರಿಗೆ


Downloaded From : http://cbseportal.com/ Courtesy : CBSE

Downloaded From : http://cbseportal.com/

3. ಜೈನರ ದೇವಾಲಯಗಳಿಗೆ ಹೀಗೆನ್ನುವರು :

(i) ಗುಡಿ

(ii) ಪಗೋಡ

(iii) ವಿಹಾರ

(iv) ಬಸದಿ

4. 'ಸಾಪೇಕ್ಷ ಸಿದ್ಧಾಂತ' ವನ್ನು ಪ್ರತಿಪಾದಿಸಿದವರು :

(i) ಐನ್‌ಸ್ಟೈನ್

(ii) ಟಾಲ್‌ಸ್ಟಾಯ್

(iii) ಗೆಲಿಲಿಯೊ

(iv) ಥಾಮಸ್ ಎಡಿಸನ್

5. ತನಗೆ ಮನೆ ಬೇಡವೆಂದ ದೇವತೆ :

(i) ಗುಡಿ ದೇವೀರಮ್ಮ

(ii) ಮನೆ ಮಂಚಮ್ಮ

(iii) ಬನಶಂಕರಮ್ಮ

(iv) ಮನೆ ಮಾದೇವಮ್ಮ

6. ಇವರು ಹಕ್ಕಿಯ ಕಣ್ಣುಗಳಾಗಿದ್ದಾರೆಂದು ಕವಿ ಬೇಂದ್ರೆ ಹೇಳಿದ್ದಾರೆ :

(i) ಬೆಟ್ಟಗುಡ್ಡಗಳು

(ii) ಕೋಟೆ ಕೊತ್ತಲಗಳು

(iii) ಸೂರ್ಯ ಚಂದ್ರರು

(iv) ಗ್ರಹ ತಾರೆಗಳು


Downloaded From : http://cbseportal.com/ Courtesy : CBSE

Downloaded From :http://cbseportal.com/

7. ‘ಹಕ್ಕಿ ಹಾರುತಿದೆ’ ಕವಿತೆಯ ಆಕರ :

(i) ಗರಿ

(ii) ಪುಚ್ಚ

(iii) ನಾಕು ತಂತಿ

(iv) ನಾದಲೀಲೆ

8. ಅಜ್ಞಾನ ಮತ್ತು ದ್ವೇಷವೆಂಬ ಕತ್ತಲೆಯನ್ನು ಈ ರೀತಿ ಹೋಗ-ಲಾಡಿಸೋಣ ಎಂದು ಕವಿ ಜಿ.ಎಸ್.ಎಸ್. ಹೇಳಿದ್ದಾರೆ :

(i) ಮೇಣದ ಬತ್ತಿ ಹಚ್ಚಿ

(ii) ಪ್ರೀತಿಯ ಹಣತೆ ಹಚ್ಚಿ

(iii) ವಿದ್ಯುತ್ ಬೆಳಕಿನಿಂದ

(iv) ತುಪ್ಪದ ದೀಪದಿಂದ

9. ಮಾನವನ ಕಾದಾಟಕ್ಕೆ ಅವನ ಈ ಗುಣ ಕಾರಣವಾಯಿತು :

(i) ಸೌಹಾರ್ದತೆ

(ii) ವೈಶಾಲ್ಯತೆ

(iii) ಔದಾರ್ಯ

(iv) ಅಹಂಕಾರ

10. ‘ಹೆಣೆದರೆ ಜೇಡನಂತೆ’ – ಈ ಕವನ ಸಂಕಲನ ಬರೆದವರು :

(i) ಸು.ರಂ. ಎಕ್ಕುಂಡಿ

(ii) ದು. ಸರಸ್ವತಿ

(iii) ಈಚನೂರು ಸಾವಿತ್ರಿ

(iv) ಅಕ್ಕ ಮಹಾದೇವಿ



Downloaded From :http://cbseportal.com/ Courtesy : CBSE

Downloaded From : http://cbseportal.com/

**VII.** ಕೆಳಗಿನ ಪ್ರಶ್ನೆಗಳಿಗೆ 5 – 6 ವಾಕ್ಯಗಳಲ್ಲಿ ಉತ್ತರ ಬರೆಯಿರಿ : *3×4=12*

1. ಎಂಜಿನಿಯರ್‌ಗಳಿಗೆ ವಿಶ್ವೇಶ್ವರಯ್ಯ ಅವರು ಏನೆಂದು ಮಾರ್ಗದರ್ಶನ ಮಾಡಿದರು ?

2. ಸಂದರ್ಭದೊಂದಿಗೆ ಸ್ವಾರಸ್ಯವನ್ನು ವಿವರಿಸಿ :

   "ಕಲೋಪಾಸಕನಿಗೆ ಸಮಾಜದಲ್ಲಿ ಯಾವ ಹೊಣೆಯೂ ಇರಬಾರದು"

   **ಅಥವಾ**

   "ಹುಸಿಯದ ಬೇಹಾರಿಯೇ ಇಲ್ಲ"

3. ಬಸವಣ್ಣನವರ ವಚನಗಳಲ್ಲಿ ಕಂಡುಬರುವ ಚಂಚಲ ಮನಸ್ಸು ಮತ್ತು ಸ್ವಭಾವಗಳನ್ನು ವಿವರಿಸಿ.

4. ಸಂದರ್ಭದೊಂದಿಗೆ ಸ್ವಾರಸ್ಯವನ್ನು ವಿವರಿಸಿ :

   "ಜೀವ ಸತ್ತು ಹೋಗುವುದು ಗೊತ್ತ."

   **ಅಥವಾ**

   "ನಿನ್ನಪದೆಸೆಯ ಬಯಸುವವನಲ್ಲ."

**VIII.** ಕೆಳಗಿನ ಪ್ರಶ್ನೆಗಳಿಗೆ 8 – 10 ವಾಕ್ಯಗಳಲ್ಲಿ ಉತ್ತರವನ್ನು ಬರೆಯಿರಿ : *4×2=8*

1. 'ನಂಬಿ ಕೆಟ್ಟವರಿಲ್ಲ' ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಯಿತು ?

   **ಅಥವಾ**

   ಶಾನುಭೋಗರನ್ನು ರಕ್ಷಿಸಿದ್ದು ಖಿರ್ದಿ ಪುಸ್ತಕವೇ ? ಅಥವಾ ಹುಲಿಯ ಧರ್ಮವೇ ? ಸಮರ್ಥನೆಯೊಂದಿಗೆ ವಿವರಿಸಿ.

2. ಧೃತರಾಷ್ಟ್ರನು ಸಂಧಿ ಮಾಡಿಕೊ ಎಂದು ದುರ್ಯೋಧನನಿಗೆ ಹೇಳಲು ಕಾರಣವೇನು ?

   **ಅಥವಾ**

   ನಿಮಗೆ ಲವನ ನಡೆವಳಿಕೆ ಮೆಚ್ಚುಗೆಯಾಯಿತೇ ? ಏಕೆ ? ವಿವರಿಸಿ.


Downloaded From : http://cbseportal.com/ Courtesy : CBSE

Downloaded From : http://cbseportal.com/

**IX.** ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರವನ್ನು ಬರೆಯಿರಿ :

(ಪಠ್ಯ ಪೋಷಕ ಅಧ್ಯಯನದಿಂದ) *1×5=5*

1. ವಿಶ್ವಧರ್ಮ ಯಾವಾಗ ರೂಪಿತವಾಗಬಲ್ಲದೆಂದು ಲೇಖಕರು ಹೇಳಿದ್ದಾರೆ ?

2. ಬಿಳಿಯ ಕೊಳ ಎಲ್ಲಿದೆ ? ರನ್ನನು ತನ್ನ ಹೆಸರನ್ನು ಎಲ್ಲಿ ಕೆತ್ತಿಸಿಕೊಂಡನು ?

3. 'ಅನ್ ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು ?

4. ಪಾರಿವಾಳಗಳು ನಾಶವಾಗಲು ಕಾರಣವೇನು ?

5. ಕೊಕ್ಕರೆಯನ್ನು ಯಾವುದಕ್ಕೆ ಹೋಲಿಸಲಾಗಿದೆ ?


Downloaded From : http://cbseportal.com/ Courtesy : CBSE